ಸಾಕ್ಷಿದಾರರನ್ನು ಕರೆಸಿ ಪ್ರಮಾಣಿಕರಿಸಲಾಯಿತು. ದಿನಾಂಕ : 20.01.2026.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ ವಕೀಲರಿಂದಃ**

ಆರೋಪಿತನ ಮನೆಗೆ ನಾನು ನನ್ನ ಗೆಳೆಯ ಲಿಂಗರಾಜ ಹೋಗಿರುತ್ತೇವೆ. ಆ ಸಮಯದಲ್ಲಿ ಆರೋಪಿ ಮತ್ತು ಆತನ ತಂದೆ ಮನೆಯಲ್ಲಿ ಇದ್ದರೂ. ನಾನು ಆರೋಪಿತನ ಮನೆಗೆ ಹೋಗಿಲ್ಲಾ ಅಂದರೆ ಸರಿಯಲ್ಲಾ. ಆರೋಪಿತನ ತಂದೆ ತನ್ನ ಮಗಳ ಮನೆಗೆ ಸುಮಾರು ದಿನಗಳಿಂದ ವಾಸವಾಗಿದ್ದಾರೆ ಅಂದರೆ ಸರಿಯಲ್ಲಾ. ಆರೋಪಿತನು 100 ಕ್ಕೆ ರೂ.2 ಕಮೀಷನ ಕೊಡುತ್ತಿದ್ದರು. ನಮ್ಮ ಬಳಿ ಅತೀ ಹೆಚ್ಚು ಮೆಣಸಿನಕಾಯಿ ಖರೀದಿ ಮಾಡುವ ಗ್ರಾಹಕ ಎಂದರೆ ಆರೋಪಿ ಮಾತ್ರ ಎಂದರೆ ಸಾಕ್ಷಿಯು ಎಲ್ಲರೂ ಬೇರೆಯವರು ಇದ್ದಾರೆ ಎಂದು ನುಡಿಯುತ್ತಾರೆ. ನನಗೆ ಆರೋಪಿತನಿಂದ ತುಂಬಾ ಆದಾಯ ಇತ್ತು ಎಂದರೆ ಸರಿಯಲ್ಲಾ. ಆರೋಪಿತರು ನಮ್ಮ ಹತ್ತಿರ ವ್ಯವಹಾರ ಮಾಡುವುದನ್ನು ನಿಲ್ಲಿಸಿದ್ದರಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲಾ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ರದ ವ್ಯವಹಾರ ಮಾಡಿರುವುದಿಲ್ಲಾ. ಈ ಪ್ರಕರಣದ ಚೆಕ ಬಿಟ್ಟು ಮೆಣಸಿನಕಾಯಿ ಮಾರಾಟ ಮಾಡಿದ ದಾಖಲೆಯನ್ನು ಹಾಜರು ಮಾಡಿದ್ದೇನೆ. ನಾನು ಮೆಣಸಿನಕಾಯಿ ಮಾರಾಟ ಮಾಡಿದ ದಾಖಲೆಗಳನ್ನು ನಾವೇ ಸೃಷ್ಟಿಮಾಡಿ ಹಾಜರು ಮಾಡಿದ್ದೇವೆ ಅಂದರೆ ಸರಿಯಲ್ಲಾ. ಆರೋಪಿತರು ಖರೀದಿ ಮಾಡಿದ ದಾಖಲೆಗಳನ್ನು ನಾನು ಹಾಜರು ಮಾಡಿಲ್ಲಾ ಅಂದರೆ ಸರಿಯಲ್ಲಾ. ನಾನು ಆದಾಯ ತೆರಿಗೆ ಭರಣ ಮಾಡುತ್ತೇನೆ. ನನ್ನ ಆದಾಯ ತೆರಿಗೆಯಲ್ಲಿ

ಆರೋಪಿತರಿಗೆ ಹಣ ಕೊಟ್ಟ ಬಗ್ಗೆ ಹೇಳಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಮನೆಯಲ್ಲಿ ಮಗ, ಮಗಳು ಇರುತ್ತೇವೆ. ನಾನು ವಾರ್ಷಿಕ ಆದಾಯ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲಾ. ಆರೋಪಿತರು ತಮ್ಮ ಮನೆಯಲ್ಲಿ ಚೆಕ ಕೊಟ್ಟರು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತರು ನಮ್ಮ ಹತ್ತಿರ ರೂ.7 ಲಕ್ಷ ಕೈಗಡ ತೆಗೆದುಕೊಂಡಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತರು ನಮ್ಮ ಹತ್ತಿರ ವ್ಯವಹಾರ ಮಾಡುವುದನ್ನು ನಿಲ್ಲಿಸಿದ್ದರಿಂದ ಅವರು ಕೊಟ್ಟ ಭದ್ರತಾ ಚೆಕ್ಕನ್ನು ನಾನು ಮತ್ತು ನನ್ನ ಮಗ ದುರುಪಯೋಗಪಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲಾ. ನನ್ನ ಪ್ರಮಾಣಪತ್ರದಲ್ಲಿ ಮತ್ತು ದೂರಿನಲ್ಲಿ ಹೇಳಿದ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲಾ. ದಿಃ 23.05.2024 ರಂದು ಆರೋಪಿತನು ಮೆಣಸಿನಕಾಯಿ ತೆಗೆದುಕೊಂಡಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತನು ಸದರಿ ದಿನ ಯಾವುದೇ ಮೆಣಸಿನಕಾಯಿ ಖರೀದಿಸಿಲ್ಲಾ ಅಂದರೆ ಸರಿಯಲ್ಲಾ. ಆರೋಪಿತರಿಗೆ ನಾನು ಯಾವುದೇ ನೋಟಿಸ ನೀಡಿಲ್ಲಾ ಅಂದರೆ ಸರಿಯಲ್ಲಾ. ಈ ಪ್ರಕರಣ ದಾಖಲಿಸಲು ಜಾರಿ ಆಗಿರು ಹಾಗೇ ನಾವೇ ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲಾ. ನಿಪಿ–01 ರಲ್ಲಿ ನಾವೇ ಸಹಿ ಸೃಷ್ಟಿಸಿದ್ದೇವೆ ಮತ್ತು ಆರೋಪಿತರ ಸಹಿ ಅಲ್ಲಾ ಅಂದರೆ ಸರಿಯಲ್ಲಾ. ನಿಪಿ–01 ರಲ್ಲಿರುವ ಅಕ್ಷರಗಳು ನಾವೇ ಬರೆದಿದ್ದೇವೆ ಅಂದರೆ ಸರಿಯಲ್ಲಾ. ಆರೋಪಿತರು ಈ ವ್ಯವಹಾರಕ್ಕೆ ಸಂಬಂದಿಸಿದ ಯಾವುದೇ ಚೆಕ ನೀಡಿಲ್ಲಾ

ಅಂದರೆ ಸರಿಯಲ್ಲಾ. ಆರೋಪಿತನು ನಮ್ಮ ಬಳಿ ಮೊದಲು ವ್ಯವಹಾರ ಮಾಡಲು ಕೊಟ್ಟ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತರು ನನಗೆ ಯಾವುದೇ ಹಣ ಕೊಡುವ ಬಾಧ್ಯತೆ ಇಲ್ಲಾ ಅಂದರೆ ಸರಿಯಲ್ಲಾ. ಆರೋಪಿತರು ನಮ್ಮ ಹತ್ತಿರ ರೂ. 7 ಲಕ್ಷ ಹಣ ಪಡೆಯುವ ಸಂದರ್ಬ ಇರಲಿಲ್ಲಾ ಆದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸರಿ ಅದೆ.

Sd/-

ಜೆಎಂಎಫ್‌ಸಿ, ಬ್ಯಾಡಗಿ.